1	2	3	4
6	Puttur	2	Processing of Cereals and Pulses Industry
		9	Leather
		1	Lime
		6	Pottery
		2	Service Industry
		1	Carpentary and Blacksmithy
		1	Medicianl Plants
		1	Polyuvastra
		3	Palmgur
		1	Gramodyoga Sales D pot
	Total	27	
7	Belthangadi	3	Processing of cereals and Pulses Industry
		1	Leather
		1	Pottery
	Total	5	
8	Sullaya	1	Village Oil
		1	Crapentary and Blacksmithy
	Total	2	

ಕೆ.ಆರ್. ಮಿಲ್ಲಿನ ಪುನರಾರಂಭದ ಬಗ್ಗೆ

೧೫೨೮ಬಿ. ಶ್ರೀ ಹರ್ಷಕುಮಾರ ಗೌಡ (ಚಾಮರಾಜ),—ಮಾನ್ಯ ಕೈಗಾರಿಕಾ, ಇಂಧನ ಮಂತ್ರಿ ಮತ್ತು ಪಕ್ಷ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಮೈಸೂರಿನಲ್ಲಿರುವ ಕೆ. ಆರ್. ಮಿಲ್ಲಿನ ಪುನರಾರಂಭಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಹಾಗೂ ಪಕ್ಷ ಸಚಿವರು).—

(ಅ) ಸದರಿ ಮಿಲ್ಲನ್ನು ತೆಗೆದುಕೊಂಡು ನಡೆಸುವ ಉದ್ದೇಶದಿಂದ ಶ್ರೀ ಕೆ. ಆರ್. ಬಾಲಸುಬ್ರಮಣ್ಯಂ (ಬಳ್ಳಾರಿ ಸ್ಪಿನ್ನಿಂಗ್ ಮಿಲ್ಸ್‌ನ ವ್ಯವಸ್ಥಾಪಕ ನಿರ್ದೇಶಕರು) ಇವರು ಬಿ.ಐ.ಎಫ್.ಆರ್.ನ ಅಪೀಲು ಪ್ರಾಧಿಕಾರದ (AAIFR) ಮುಂದೆ ತಮ್ಮ ಯೋಜನೆಯನ್ನು ಇಟ್ಟಿದ್ದಾರೆ. ಈ ಮಧ್ಯೆ ತಿರುಮಗಲ್ ಮಿಲ್ಸ್ ನಿಯಮಿತ ಕಂಪನಿಯ ಆಡಳಿತ ವರ್ಗದ ಪರವಾಗಿ ಶ್ರೀ ಬಿ. ಆರ್. ವೆಂಕಟಾಚಲಂ ಅವರು ಕೆ ಆರ್. ಮಿಲ್ಲನ್ನು ತೆಗೆದುಕೊಂಡು ನಡೆಸಲು ಮುಂದೆ ಬಂದಿದ್ದು ಈ ಬಗ್ಗೆ ದಿನಾಂಕ ೧೧-೧-೧೯೯೦ರ ತಮ್ಮ ಪತ್ರದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಕೆ. ಆರ್. ಮಿಲ್ಲನ್ನು ಪುನಶ್ಚೇತನಗೊಳಿಸಬಹುದಾದ ನಿಪುಣತೆ ಹಾಗೂ ಸಂಪನ್ಮೂಲ ಇವರಿಗೆ ಇರುವ ಕಾರಣ, ಈ ಪ್ರಸ್ತಾವನೆಯನ್ನು ಅಧ್ಯಯನ ಮಾಡಿ ಬಿ.ಐ.ಎಫ್.ಆರ್.ನ

ಅಪೀಲು ಪ್ರಾಧಿಕಾರವು ಆಗಸ್ಟ್ ತಿಂಗಳಿನಲ್ಲಿ ನಡೆಸಲಿರುವ ''ಹಿಯರಿಂಗ್''ನಲ್ಲಿ ಮಂಡಿಸಲು ಐ.ಡಿ.ಬಿ.ಐ.ಯನ್ನು ಸರ್ಕಾರ ಕೋರಿದೆ. ಸದರಿ ಮಿಲ್ಲನ್ನು ಪುನಃ ಪ್ರಾರಂಭಿಸಲು ಸರ್ಕಾರವು ಉತ್ಸಾಹ ತಾಳಿದೆ ಹಾಗೂ ಈ ಬಗ್ಗೆ ಬಿ.ಐ.ಎಫ್.ಆರ್.ನ ತೀರ್ಮಾನದ ಅನುಸಾರವಾಗಿ ಕ್ರಮ ತೆಗೆದು ಕೊಳ್ಳಲಾಗುವುದು.

ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ಜವಳಿ ಕೈಗಾರಿಕೆಗಳಿಗಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸುವ ಬಗ್ಗೆ

೧೪೬೪. ಶ್ರೀ ಸುಭಾಶ್ ಜೋಶಿ (ನಿಪ್ಪಾಣಿ).—ಮಾನ್ಯ ಉಪ ಸಚಿವೆ, ಸಣ್ಣ ಕೈಗಾರಿಕೆಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಸರ್ಕಾರದವರು ಕೈಮಗ್ಗ, ವಿದ್ಯುತ್ ಮಗ್ಗಗಳು ಹಾಗೂ ಜವಳಿಗಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಹೊಂದಲು ಯೋಚಿಸಿದ್ದಾರೆಯೇ ?

(ಆ) ಹಾಗಾದರೆ, ಯಾವಾಗ ಬೇರೆಗೊಳಿಸಲಾಗುವುದು ?

(ಇ) ಸರ್ಕಾರದವರು ನಿರ್ದೇಶನಾಲಯಕ್ಕೆ ಪ್ರತ್ಯೇಕ ಮಂತ್ರಿಗಳನ್ನು ಹೊಂದಲು ಯೋಚಿಸಿದ್ದಾರೆಯೇ ?

ಶ್ರೀಮತಿ ಸುಮಾ ವಸಂತ (ಸಣ್ಣ ಕೈಗಾರಿಕೆಯ ಉಪ ಸಚಿವೆ).—

(ಅ) ಹೌದು.

(ಆ) ಈಗಾಗಲೇ ಸರ್ಕಾರದ ಆದೇಶವಾಗಿರುವುದು.

(ಇ) ಸದ್ಯಕ್ಕೆ ಈ ವಿಚಾರ ಇರುವುದಿಲ್ಲ.

ಬೆಂಗಳೂರು ನಗರದಲ್ಲಿರುವ ರಸ್ತೆ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ಬಗ್ಗೆ

೧೩೪೯. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಲಿಡ್ಕರ್ ಮತಿಯಿಂದ ಬೆಂಗಳೂರು ನಗರಕ್ಕೆ ಇಲ್ಲಿಯವರೆವಿಗೂ ನೀಡಲಾಗಿರುವ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ;

(ಆ) ಅವುಗಳ ಪೈಕಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿರುವ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ಎಷ್ಟು ;

(ಇ) ಲಿಡ್ಕರ್ ಮತಿಯಿಂದ ಬೆಂಗಳೂರು ನಗರಕ್ಕೆ ೧೯೯೯–೨೦೦೦ನೇ ಸಾಲಿನಲ್ಲಿ ನೀಡಲಾಗಿರುವ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ಎಷ್ಟು :

(ಈ) ಅವುಗಳ ಪೈಕಿ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ೧೯೯೯–೨೦೦೦ನೇ ಸಾಲಿನಲ್ಲಿ ನೀಡಲಾಗಿರುವ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು).—

(ಅ) ೧೧೬

(ಆ) ೦೧

(ಇ) ಸಿ೨

(ಈ) ಸಾರ್ವಜನಿಕ ಸಂಚಾರಕ್ಕೆ ತೊಂದರೆ ಆಗುವುದರಿಂದ ಇಂತಹ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳನ್ನು ನಿರ್ಮಿಸಲು ಬೆಂಗಳೂರು ನಗರಸಭೆಯವರು ಆಕ್ಷೇಪಣೆಯನ್ನು ಎತ್ತಿದ್ದಾರೆ. ಈ ವಿಷಯವನ್ನು ನಗರಸಭೆಯ ಅಧಿಕಾರಿಗಳೊಡನೆ ಚರ್ಚಿಸಲಾಗುತ್ತಿದೆ. ಈ ವಿಷಯ ಇತ್ಯರ್ಥವಾದ ನಂತರ ೧೯೯೯–೨೦೦೦ ರಲ್ಲೂ ಸಹ ಬೀದಿ ಬದಿಯ ಪೆಟ್ಟಿಗೆ ಅಂಗಡಿಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.